ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ ಎಮ್ ಎಫ್ ಸಿ , ಕುಂದಗೋಳ

ಓ ಎಸ್ ನಂಬರ **11/2019** ಡಿ ಡಬ್ಲ್ಯೂ **5**

ಸಾಕ್ಷಿಯ ಹೆಸರು ಃ ಯಲ್ಲಪ್ಪ ಅಮ್ಮಿನಭಾವಿ

ತಂದೆಯ ಹೆಸರು ಃ ಬಸಪ್ಪ

ವಯಸ್ಸು ಃ 64 ವರ್ಷ

ಉದ್ಯೋಗ ಃ ಒಕ್ಕಲುತನ.

ವಾಸಸ್ಥಳ ಃ ಭರಧ್ವಾಡ.

ದಿನಾಂಕಃ 19/12/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಸಿ ಎಮ್ ಕೆ ವಕೀಲರಿಂದ ಃ

1. ನಮ್ಮ ಗ್ರಾಮದ ಚನ್ನಪ್ಪ ತಂದೆ ಯಲ್ಲಪ್ಪ ಮಾಡಳ್ಳಿ ನನಗೆ ಗೊತ್ತು. ಸದರಿಯವರ ಅಣ್ಣ ಸಿದ್ದಲಿಂಗಪ್ಪನ ಪರಿಚಯವಿದೆ. ಸದರಿ ಚನ್ನಪ್ಪ ತೀರಿಕೊಂಡಿದ್ದಾರೆ. ಎಷ್ಟು ವರ್ಷ ಆಗಿದೆ ಎಂದರೆ 8-10 ವರ್ಷಗಳಾಗಿವೆ. ಸಿದ್ದಲಿಂಗಪ್ಪ ತೀರಿಕೊಂಡಿದ್ದಾರೆ. ಎಷ್ಟು ವರ್ಷ ಆಗಿದೆ ಎಂದರೆ 3-4 ವರ್ಷ ಆಗಿರಬಹುದು. 2 ನೇ ಪ್ರತಿವಾದಿ ಸಂಗಪ್ಪ ಗೊತ್ತು. ವಾದಿಯರ ಪರಿಚಯವಿದೆ. ಚನ್ನಪ್ಪ ತಂದೆ ಯಲ್ಲಪ್ಪ ಮಾಡಳ್ಳಿ ಅವರು ಮಾಡಿದ ಕಾಗದ ಪತ್ರಕ್ಕೆ ಸಹಿ ಹಾಕಿದ್ದೀರಾ ಎಂದರೆ ಇಲ್ಲ. ನಿಡಿ. 3 ರಲ್ಲಿ ನನ್ನ ಸಹಿಯಿದೆ. ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸದರಿ ಸಹಿಯನ್ನು ನಿಡಿ. 3 ಬಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2010-11 ರಲ್ಲಿ ಮಾಡಿರುತ್ತೇನೆ. ಸದರಿ ಸಹಿಯನ್ನು ಭರಧ್ವಾಡ ಗ್ರಾಮದ ದ್ಯಾಮವ್ವನ ಗುಡಿಯ ಎದುರಿಗೆ ಮಾಡಿರುತ್ತೇನೆ. ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ಯಾವುದೇ ದಾಖಲೆಗೆ ಓದಿ ತಿಳಿದುಕೊಂಡು ಸಹಿ ಮಾಡುತ್ತೀರಾ ಎಂದರೆ ಅಂಥಹ ಸನ್ನಿವೇಶ ಬಂದಿಲ್ಲ, ಬ್ಯಾಂಕಿನ ದಾಖಲೆಗಳಿಗೆ ಸಾಲ ಪಡೆಯುವಾಗ ಕೇಳಿ ಸಹಿ ಮಾಡುತ್ತೇನೆ. ನಿಡಿ. 3 ಕ್ಕೆ ನಾನು ನಂಬಿಕೆ ಮೇಲೆ ಸಹಿ ಮಾಡಿದ್ದೇನೆ. ಓದದೇ ಸಹಿ ಮಾಡಿದ್ದೇನೆ. ಪ್ರತಿವಾದಿ ಸಾಕ್ಷಿದಾರ 4 ಮಲ್ಲಪ್ಪ ಗೊತ್ತು. ನನಗೆ ಈರಣ್ಣ ಭದ್ರಾಪೂರ ಗೊತ್ತಿಲ್ಲ. ಕೃಷ್ಣಗೌಡ ಪಾಟೀಲ ಗೊತ್ತು. ಅವರು ಹೇಗೆ ಸಹಿ ಮಾಡುತ್ತಾರೆ ಎಂದು ಗೊತ್ತಿಲ್ಲ. ಅವರು ಗ್ರಾಮದಲ್ಲಿಲ್ಲ. ಅವರ ಮಗ ನೌಕರಿ ಮಾಡುತ್ತಾನೆ. ಎದ್ದು ಅಡ್ಡ್ಯಾಡುವ ಪರಿಸ್ಥಿತಿ ಇಲ್ಲ ಎಂದರೆ 4-5 ವರ್ಷ ಆಯಿತು ನಾನು ಅವರನ್ನು ನೋಡಿಲ್ಲ. ದಿಃ 29-08-2013 ರಂದು ಚನ್ನಪ್ಪ ತಂದೆ ಯಲ್ಲಪ್ಪ ಮಾಡಳ್ಳಿ ಅವರು ಬರೆದು ಕೊಟ್ಟ ಮೃತ್ಯು ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆತ ಪತ್ರವನ್ನು ಸುರಳಿ

ಸುತ್ತಿಕೊಂಡು ಬಂದಿದ್ದ. ನನ್ನ ಕೈ ಹೊಲಸಾಗಿತ್ತು, ಆಗ ನಾನು ಓದದೇ ಸಹಿ ಮಾಡಿರುತ್ತೇನೆ. ಕುಂದಗೋಳದ ಎಸ್ ಜಿ ಘಡೋಸಿ ದಸ್ತು ಬರಹಗಾರರ ಕಚೇರಿಯಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚನ್ನಪ್ಪ ಸಹಿ ಮಾಡಿದ್ದನ್ನು ನೋಡಿ ನಿಡಿ. 3 ಕ್ಕೆ ನಾನು ಸಾಕ್ಷಿ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಸಾಕ್ಷಿ ನುಡಿಯುವಂತೆ ನಿಮಗೆ ಸಮನ್ಸ ಬಂದಿತ್ತಾ ಎಂದರೆ ಸಾಕ್ಷಿ ಸಮನ್ಸ ಮತ್ತು ವಾರೆಂಟ್ ಏನು ಬಂದಿಲ್ಲ. ನನ್ನ ಮಗ ನಿನ್ನೆ ವಾರೆಂಟ್ ಬಂದಿದೆ ಈ ದಿನ ನ್ಯಾಯಾಲಯದಲ್ಲಿ ಮುದ್ಧತ್ತಿದೆ ಎಂದು ನನಗೆ ಹೇಳಿದ್ದರಿಂದ ಬಂದಿದ್ದೇನೆ. ಕುಂದಗೋಳದ ನ್ಯಾಯಾಲಯದಲ್ಲಿ ವಾದಿ ಹಾಗೂ ಪ್ರತಿವಾದಿಗಳ ಕೇಸದಲ್ಲಿ ಸಾಕ್ಷಿನ ನುಡಿಯುವಂತೆ ಹೇಳಿದ್ದನು. ನನ್ನೊಂದಿಗೆ ಉಳಿದ ಸಾಕ್ಷಿದಾರರು ಸಹಿ ಮಾಡಿದ್ದಾರಾ ಎಂದರೆ ನನಗೆ ಗೊತ್ತಿಲ್ಲ. ಇಂದು ನಾನು ವಾದಿಯರ ಜೊತೆ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿಯಲ್ಲ. ಚನ್ನಪ್ಪನ ಮೃತ್ಯು ಪತ್ರಕ್ಕೆ ಸಹಿ ಮಾಡಿದ್ದರು ಸಹ ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉದ್ದೇಶ ಪೂರ್ವಕವಾಗಿ ಮನೆ ಕಟ್ಟುವಾಗ ಕಾಗದ ಪತ್ರಕ್ಕೆ ಸಹಿ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ವಾದಿ ಪರ ವಕೀಲರಿಂದ ಃ ಇಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ